ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಇಲ್ಲ, ಸಾಮೂಹಿಕ ಅಪಘಾತ ವಿಮಾ ಯೋಜನೆಯಲ್ಲಿ ವಿಮಾ ಸೌಲಭ್ಯದ ಭದ್ರತೆಯನ್ನು ಒದಗಿಸಲಾಗಿದ್ದು, ಮೀನುಗಾರಿಕೆ ಮಾಡುವಾಗ ಮೃತರಾದವರ ವಾರಸುದಾರರಿಗೆ ರೂ. 35,000 ಹಣವನ್ನು ಅಂಗವಿಕಲವಾದವರಿಗೆ ರೂ. 17,500.00 ಹಣವನ್ನು ನೀಡಲಾಗುತ್ತಿದೆ. ಅಪಘಾತ ವಿಮಾ ಸೌಕರ್ಯ ಒದಗಿಸಲಾಗಿದೆ.

ಮರಣ ಪ್ರಕರಣಗಳಲ್ಲಿ	206 ಜನರಿಗೆ
ಅಂಗವಿಕಲತೆ	21 ಜನರಿಗೆ

ಆ)	1995-96	98.743 ಕೋಟಿ ರೂ.ಗಳು
	1996-97	99.2636 ಕೋಟಿ ರೂ.ಗಳು
	1997-98	117.3187 ಕೋಟಿ ವಿದೇಶಿ

ವಿನಿಮಯ ಕರಾವಳಿ ಮಿನುಗಾರಿಕೆಯಿಂದ ಬಂದಿರುವುದು. ಒಳನಾಡು ಮೀನುಗಾರಿಕೆಯಿಂದ ಗಣನೀಯ ವಿದೇಶಿ ವಿನಿಮಯ ಬಂದಿರುವುದಿಲ್ಲ.

ಸದಲಗಾ-ದತ್ತವಾಡ ಬ್ರಿಡ್ಜ್ ಕಾಮಗಾರಿ

2298 - ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸದಲಗಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸದಲಗಾ - ದತ್ತವಾಡ ಬ್ರಿಡ್ಜ್ ಕಾಮಗಾರಿ ಸ್ಥಗಿತಗೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೇ ಅದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಆ) ಸದರೀ ಬ್ರಿಡ್ಜ್ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಇ) ಸದರೀ ಬ್ರಿಡ್ಜ್ ಕಾಮಗಾರಿಗಳನ್ನು ಮಾಡುತ್ತಿರುವ ಗುತ್ತಿಗೆದಾರರಿಗೆ ಕೊಡಬೇಕಾದ ಬಾಕಿ ಹಣವನ್ನು ಎಷ್ಟು ದಿನಗಳಲ್ಲಿ ಕೊಡಲಾಗುವುದು ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ. ಈ ಕಾಮಗಾರಿಯು ಮಳೆಗಾಲ ಹಾಗೂ ನದಿಗೆ ಬಂದ ಪ್ರವಾಹದಿಂದ ಸ್ಥಗಿತಗೊಂಡಿರುವುದು. ಈ ಕಾಮಗಾರಿಗಾಗಿ ಮಹಾರಾಷ್ಟ್ರ ಸರ್ಕಾರದಿಂದ ಬರಬೇಕಾದ ಒಟ್ಟು ರೂ. 72.00 ಲಕ್ಷಗಳಲ್ಲಿ ಇನ್ನೂ ರೂ. 48.00 ಲಕ್ಷಗಳ ವಂತಿಗೆ ಬರಬೇಕಾಗಿದೆ. ರಾಜ್ಯ ಸರ್ಕಾರದ ಪ್ರಸ್ತುತ ವರ್ಷದ ಅನುದಾನ ರೂ. 30.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಸದರೀ ಕಾಮಗಾರಿಗಳು ಗುತ್ತಿಗೆ ಕರಾರುಗಳ ಪ್ರಕಾರ 2000 ಇಸವಿಯ ಡಿಸೆಂಬರ್ ತಿಂಗಳಲ್ಲಿ ಮುಗಿಸಬೇಕಾಗಿದ್ದು, ಈ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಮಹಾರಾಷ್ಟ್ರ ಸರಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡುವಂತೆ ಮಹಾರಾಷ್ಟ್ರ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್ ರವರಿಗೆ ಕೋರಲಾಗಿದ್ದು, ಹಣ ಬಿಡುಗಡೆಯಾದ ನಂತರ ಗುತ್ತಿಗೆದಾರರಿಗೆ ಬಾಕಿ ಹಣವನ್ನು ಪಾವತಿ ಮಾಡಲಾಗುವುದು.

ರಾಜ್ಯ ಸರ್ಕಾರದ ಆದಾಯ

2301 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *1994ನೇ ಸೆಪ್ಟೆಂಬರ್ 30ಕ್ಕೆ ರಾಜ್ಯ ಸರ್ಕಾರ ವಿವಿಧ ಮೂಲಗಳಿಂದ ಪಡೆದ ಒಟ್ಟು ಸಾಲದ ಮೊತ್ತ ಎಷ್ಟು? ಈ ಸಾಲಗಳಿಗೆ ನೀಡಬೇಕಾಗಿದ್ದ ವಾರ್ಷಿಕ ಬಡ್ಡಿ ಎಷ್ಟು?*

2) *1998ನೇ ಸೆಪ್ಟೆಂಬರ್ 30ಕ್ಕೆ ರಾಜ್ಯ ಸರ್ಕಾರ ವಿವಿಧ ಮೂಲಗಳಿಂದ ಪಡೆದ ಸಾಲಗಳ ಒಟ್ಟು ಮೊತ್ತ ಎಷ್ಟು? (ಕೃಷ್ಣ ಜಲ ಭಾಗ್ಯ ನಿಗಮದ ಬಾಂಡುಗಳಂತಹ ಸಾಲಗಳು ಸೇರಿ) ಈ ಸಾಲಗಳ ಮೇಲೆ ನೀಡಬೇಕಾಗುವ ವಾರ್ಷಿಕ ಬಡ್ಡಿ ಎಷ್ಟು?*

3) *ರಾಜ್ಯದ ಒಟ್ಟು ಆದಾಯದಲ್ಲಿ ಸಾಲದ ಪ್ರಮಾಣ ಎಷ್ಟು?*

4) *ರಾಜ್ಯದ ಒಟ್ಟು ವೆಚ್ಚದಲ್ಲಿ ಬಡ್ಡಿ ಹಣದ ಪ್ರಮಾಣ ಎಷ್ಟು?*

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :

1) ಅ) ರಾಜ್ಯ ಸರ್ಕಾರದ ಸಾಲದ ಸ್ಥಿತಿಯನ್ನು ಸಾಮಾನ್ಯವಾಗಿ ಮಾರ್ಚ್ ಕೊನೆಗೆ ಸಂಕಲನಗೊಳಿಸಲಾಗುವುದು.

ಆ) ದಿ.31.3.94ರ ಅಂತ್ಯಕ್ಕೆ ರೂ.5906 ಕೋಟಿ ಸಾಲವನ್ನು ವಿವಿಧ ಮೂಲಗಳಿಂದ ಪಡೆಯಲಾಗಿತ್ತು.

ಇ) ಸದರಿ ಸಾಲದ ಮೇಲೆ 93-94ನೇ ಸಾಲಿನ ಅವಧಿಗೆ ರೂ. 576.75 ಕೋಟಿ ಬಡ್ಡಿ ಹೊಣೆಗಾರಿಕೆ ಇತ್ತು.

2) ಅ) ರಾಜ್ಯ ಸರ್ಕಾರದ ಸಾಲದ ಸ್ಥಿತಿಯನ್ನು ಸಾಮಾನ್ಯವಾಗಿ ಮಾರ್ಚ್ ಕೊನೆಗೆ ಸಂಕಲನಗೊಳಿಸಲಾಗುವುದು.

ಆ) ದಿ. 31.3.98ರ ಅಂತ್ಯಕ್ಕೆ ರೂ. 10471.10 ಕೋಟಿ ಸಾಲವನ್ನು ವಿವಿಧ ಮೂಲಗಳಿಂದ ಪಡೆಯಲಾಗಿತ್ತು.

ಇ) ಸದರಿ ಸಾಲದ ಮೇಲೆ 97-98ನೇ ಸಾಲಿನ ಅವಧಿಗೆ ರೂ. 1133 ಕೋಟಿ ಬಡ್ಡಿ ಹೊಣೆಗಾರಿಗೆ ಇತ್ತು.